ಹೋಗಿದ್ದವು. ಇನ್ನು ಮನಸ್ಸಿನ ಕಥೆಯನ್ನಂತೂ ಕೇಳ್ಬೇಡ. ಅದು ಇರದೇ ಇದ್ದಿದ್ದರೆ ಚೆನ್ನಾಗಿತ್ತು ಎನಿಸುತ್ತಿತ್ತು. ಮಗ ಇಂಗ್ಲಿಷ್ ಸ್ಕೂಲಲ್ಲಿ ಓದಬೇಕು ಅನ್ನೋ ನಿಮ್ಮ ಆಸೆಗೆ ನನ್ನ ಬಲಿಪಶು ಮಾಡಿದ್ರಿ. ಕನ್ನಡ ಶಾಲೇಲಿ ಓದಿದ್ರೆ ಅರ್ಥ ಆಯ್ತಾ ಇತ್ತು. ಚೆನ್ನಾಗಿ ಓದಬೌದಿತ್ತು' ಎಂದು ಒಂದೇ ಉಸಿರಲ್ಲಿ ಹೇಳಿದಾಗ ಕುಪ್ಪಣ್ಣನಿಗೆ ಗರ ಬಡಿದಂತಾಗಿತ್ತು. ಹಾಗಾದರೆ ತನ್ನ ಕನಸನ್ನು ನನಸಾಗಿಸಲು ಇಷ್ಟು ದಿನಗಳವರೆಗೆ ತಾನು ಗಂಧ ತೇಯ್ದಂತೆ ಜೀವ ತೇಯ್ದಿದ್ದು...

ಮಗನ ಮಾತು ಅಚ್ಚರಿ ತರಿಸಿದರೂ ನಿಜವಿತ್ತು. ಒಪ್ಪೊತ್ತು ಉಂಡರೆ ಸಂಜೆ ಕೂಳಿಗಾಗಿ ಪರದಾಡುತ್ತಿದ್ದ ಕೇರಿ. ಇಂಗ್ಲಿಷ್ ಸ್ಕೂಲು, ಬ್ಯಾಗ್ ಅಂತೆಲ್ಲ ಕನಸು ಕಾಣದೇ ನಿರ್ಲಿಪ್ತವಾಗಿದ್ದ ಕೇರಿ. ಸಂಜೆ ಬೇರೆಡೆಯೆಲ್ಲಾ ಮಕ್ಕಳು ಓದುವಾಗ ಇಲ್ಲಿ ಗಂಡಸರು ಕುಡಿದು ಬಂದು ಹಾಡುವ, ಹೆಂಡತಿಯನ್ನೋ ಮಕ್ಕಳನ್ನೋ ಹೊಡೆಯುವ ಪ್ರಹಸನ. ಗಿರಿಜವ್ವನಂತೂ 'ನಂಗೆ ಅವರ ಶಾಲೇಲಿ ಅದೇನ್ಮಾತಾಡ್ತಾರೋ ಅರ್ಥ ಆಗಾಕಿಲ್ಲ. ನಾ ಸ್ಕೂಲಿಗೆ ಹೋಗಲ್ಲ' ಎಂದು ಸ್ಪಷ್ಟವಾಗಿ ಹೇಳಿಯೇ ಬಿಟ್ಟಿದ್ದಳು. ಕುಪ್ಪುಸ್ವಾಮಿಗೂ ಹೆದರಿಕೆ. ಅವನಿಗಂತೂ ಇಂಗ್ಲಿಷ್‌ನಲ್ಲಿ ಮಾತನಾಡಲು ಸಾಧ್ಯವಿರಲಿಲ್ಲ. ಅವರು ಹೇಳಿದ್ದು ಪೂರ್ತಿ ಅರ್ಥವೂ ಆಗುತ್ತಿರಲಿಲ್ಲ. ಇದನ್ನರಿತು ಕೆಲವೊಬ್ಬ ಟೀಚರ್‌ಗಳು ಕನ್ನಡದಲ್ಲಿ ಹೇಳುತ್ತಿದ್ದರು. 'ಅವನಿಗೆ ನಾವು ಹೇಳುವುದು ಅರ್ಥ ಆಗಲ್ಲ. ಮೊದಲು ಇಂಗ್ಲಿಷ್ ಚೆನ್ನಾಗಿ ಕಲಿಸಿ. ಮನೆಯಲ್ಲಿ ಯಾರಾದರೂ ಚೆನ್ನಾಗಿ ಹೇಳಿಕೊಡಬೇಕು. ಇಲ್ಲವಾದರೆ ಟ್ಯೂಷನ್‌ಗೆ ಸೇರಿಸಿ. ಇಷ್ಟು ದಿನ ನಾವು ಹೇಗೋ ಪಾಸು ಮಾಡುತ್ತಿದ್ದೇವೆ. ಹತ್ತನೇ ತರಗತಿಯ ಬೋರ್ಡ್ ಎಕ್ಸಾಮ್‌ನಲ್ಲಿ ಹಾಗಾಗುವುದಿಲ್ಲ. ಅವನು ಪ್ರಿಲಿಮನರಿ ಪರೀಕ್ಷೆ ಪಾಸಾದರೆ ಮಾತ್ರ ಫೈನಲ್ ಪರೀಕ್ಷೆಗೆ ಫಾರ್ಮ್ ಕೊಡ್ತಾರೆ' ಎಂದಾಗ ಅಲ್ಪ ಸ್ವಲ್ಪ ಪರಿಸ್ಥಿತಿಯ ಅರಿವಾಗಿ ಟ್ಯೂಷನ್‌ಗೆ ಸೇರಿಸಿದ್ದಾಯಿತು. ಇನ್ನೇನು ಮಾಡಲು ಸಾಧ್ಯವಿತ್ತು?

'ನಾವೇನ್ಲಾ ಮಾಡಕ್ಕಾಯ್ತಿತ್ತು? ನಾವೋದಿದ್ರೆ, ನಮಿಗೆ ಬಂದಿದ್ರೆ ನಿಂಗೆ ಯೇಳ್ಕೊಡ್ತಿರಲಿಲ್ವಾ? ನಾವಾಗ್ಲಿಲ್ಲ, ನಮ್ಮ ಮಕ್ಕಳಾದ್ರೂ ಓದಿ ಉದ್ದಾರ ಆಗ್ಲಿ ಅಂತ ಬೆವರು ಬಸಿದಿದ್ದೇ ಬಂತು. ನೀನೋ... ಎಲ್ಲಾ ಬಿಟ್ಟು ಓಡಿ ಹೋದೆ. ನೆಂಟರೆಲ್ಲಾ ನಗಾಡಿದ್ರು. ದೊಡ್ಡ ಇಂಗ್ಲಿಷ್ ಸಾಲೆ ಅಂತ ಕಳಿಸಿದ. ದುಡ್ಡೂ ಹಾಳಾಯ್ತು. ಹುಡುಗಾನೂ ಕೈಗೆ ಸಿಕ್ಕಲಿಲ್ಲ ಅಂತ' ಎನ್ನುತ್ತ ಕುಪ್ಪಣ್ಣ ತುಸು ಜೋರಾಗಿಯೇ ಸ್ವರ ಏರಿಸಿದ.

ಬೆವರು ಒರೆಸಿಕೊಳ್ಳುತ್ತಾ 'ಅಂಬೇಡ್ಕರ್ ಕೇಳಿಲ್ಲವಾ? ಅಬ್ದುಲ್ ಕಲಾಮ್ ಕೇಳಿಲ್ಲವಾ? ಅವರೆಲ್ಲ ಮನೇಲಿ ಏನೇನೂ ಅನುಕೂಲ ಇಲ್ದೇ ಇದ್ರೂ ಬೀದಿ ದೀಪದ ಬೆಳಕಲ್ಲಿ ಓದಿ ಏಟೊಂದು ದೊಡ್ಡ ಮನುಷ್ಯರಾದ್ರು. ನಿಂಗೆ ಉಣ್ಣಾಕಿಕ್ಕಿ... ಸ್ಕೂಲ್ ಫೀಸ್ ಕಟ್ಟಿ... ಯೂನಿಫಾರಮ್ಮು, ಮಣ್ಣು ಮಸಿ ಅಂತೆಲ್ಲಾ ತೆಕ್ಕೊಟ್ರೂ ಕತೆ ಹೇಳ್ತೀಯಾ, ಕತ್ತೆ ಭಡವ' ಎನ್ನುತ್ತ ಹಲ್ಲು ಕಡಿದ.

ತಿಪ್ಪ ಏನೇನೂ ಹೆದರದೆ ವ್ಯಂಗ್ಯ ನಗೆ ನಕ್ಕು 'ಅದೇ ಅನ್ನಾದು... ಎಲ್ಲರಿಗೂ ಉದಾಹರಣೆ ಕೊಡಾಕೆ ಸಿಕ್ಕಿಬಿಟ್ಟವ್ರೆ ಅಂಬೇಡ್ಕರ್, ಕಲಾಮ್ ಸಾಹೇಬರು. ಅವರು ಅಸಾಮಾನ್ಯರು... ಬುದ್ಧಿವಂತರು. ನಾನು ಅಂಬೇಡ್ಕರ್ ಅಲ್ಲ. ಅಬ್ದುಲ್ ಕಲಾಮ್ ಅಲ್ಲವೇ ಅಲ್ಲ. ಒಬ್ಬ ಸಾಮಾನ್ಯ ಹುಡುಗ. ನಿನ್ನ ಮಗ. ನಿನ್ನಂಗೇ ನನ್ನ ತಲೆಗೆ ಓದು ಹತ್ತಲಿಲ್ಲ. ಆ ಮ್ಯಾಥ್ಸ್, ಸೈನ್ಸುಗಳಿಗಿಂತ ಜಲ್ಲಿಕಲ್ಲು, ಇಟ್ಟಿಗೆಗಳೇ ಚೆನ್ನಾಗಿ ಕಂಡ್ವು. ಅದಿಕ್ಕೇ ಚಿತ್ರದುರ್ಗಕ್ಕೆ ಓಡಿಹೋದೆ. ಎರಡು ವರ್ಷ ಒಬ್ಬ ಮೇಸ್ತ್ರಿ ತಾವ ಕೆಲಸಾ ಮಾಡ್ದೆ. ಭೋ ಚೆಂದಾಗಿ ಕೆಲಸಾ ಮಾಡ್ತಿ ಅಂತ ಈ ವಯ್ಯ ಅಲ್ಲಿಂದ ಕರೆತಂದವ್ರೆ. ಮುಂದಾದ್ರೂ ಕನ್ನಡದಲ್ಲೇ



ಓದಿ ಪರೀಕ್ಷೆ ಕಟ್ಟಬೇಕು ಅಂತಿವ್ನಿ. ತಿಪ್ಪ ಅನ್ನೋ ಹೆಸರಲ್ಲೇ ಬೆಳೀಬೇಕೂ ಅಂತಿವ್ನಿ' ಎಂದು ಮಾತು ನಿಲ್ಲಿಸಿದ.

ಕುಪ್ಪಣ್ಣ ಮಗನನ್ನು ಬಿಟ್ಟ ಕಣ್ಣಿನಿಂದ ನೋಡುತ್ತಲೇ ಇದ್ದ. ವಯಸ್ಸು ಚಿಕ್ಕದಿದ್ದರೂ ಮಗ ಬೆಳೆದಿದ್ದಾನೆ, ಪ್ರಬುದ್ಧನಾಗಿದ್ದಾನೆ ಎನಿಸಿತು. ವಾಸ್ತವದ ಬದುಕಿನೊಂದಿಗೆ ರಾಜಿ ಮಾಡಿಕೊಳ್ಳಬೇಕಾದ ಅನಿವಾರ್ಯತೆಯೂ ಇತ್ತು. ಹೌದು... ತನಗೆ ವಿದ್ಯೆ ಒಲಿಯಲಿಲ್ಲ. ಮಣ್ಣು, ಸಿಮೆಂಟುಗಳೇ ಹೊಟ್ಟೆ ತುಂಬಿಸಿದವು. ಅವನಿಗೂ ಅಷ್ಟೇಯಾ... ಎನಿಸಿದಾಗ ಸಮಾಧಾನದ ನಗೆ ಮೂಡಿತು. ತಿಪ್ಪ ಮುಂದುವರಿದು, 'ಈಗ ಇಷ್ಟು ವರ್ಷಗಳ ಮೇಲೆ ನೀನೊಂದು ಮನೆ ಕಟ್ಕೊಂಡು, ನೆಲೆ ನಿಂತ್ಕೊಂಡು ಒಳ್ಳೆ ಮನುಷ್ಯ ಆಗಿದ್ದೀಯಲ್ಲ. ಅಷ್ಟೇ ಸಾಕು... ನಂಗೂ ಹಂಗೇ ಆದ್ರೆ ಆಯ್ತು' ಎಂದ. 'ಹೌದಲ್ಲ...' ಎನಿಸಿತು ಕುಪ್ಪುಸ್ವಾಮಿಗೆ. 'ಚಿಕ್ಕ ವಯಸ್ನಾಗೇ ಚೆನ್ನಾಗಿ, ಚುರುಕಾಗಿ ಕೆಲಸಾ ಮಾಡಿ ಹೊಗಳಿಸಿಕೊಂಡ್ವೈತೆ ಮಗಾ. ಅಂದ್ರೆ ನನ್ನ ವಯಸ್ನಾಗೆ ದೊಡ್ಡ ಕಾಂಟ್ರಾಕ್ಟರ್ ಆಗಬೋದು. ಕನ್ನಡದಲ್ಲಿ ಓತ್ತೀನಿ ಅಂತವ್ನೆ... ಕಾಲೇಜಿಗೂ ಹೋಗಬೋದು... ತಾನು ತಂದೆ ತಾಯಿಯರನ್ನ ಚೆಂದಾಗಿ ನೋಡಿಕೊಂಡಂತೆ ಇವನೂ ನಮ್ಮನ್ನು ನೋಡಿಕೊಳ್ಳಬಹುದು' ಎನಿಸಿದಾಗ ಕೋಪ ಮಾಯವಾಗಿ ಮುಖ ಅರಳಿತು. ಅಲೆಗಳ ಹೊಡೆತಕ್ಕೆ ಮರಳು ಕೊಚ್ಚಿಕೊಂಡು ಹೋದಂತೆ ಹಳೆ ಕನಸು ಮಾಯವಾಗಿತ್ತು. ಅಲ್ಲಿ ಹೊಸ ಕುಡಿಯೊಂದು ಒಡಮೂಡಿತ್ತು.

'ಹ್ಞೂಂ... ಆಗ್ಲೇಳು. ಹಣೇಲಿ ಬರೆದಂಗೆ... ಶಿವಾ ಮಾಡಿಸಿದಂತಾಯ್ತದೆ. ಅದಿರ್ಲಿ ಇಷ್ಟು ದಿನ ಎಲ್ಲಿದ್ದೆ... ಹೆಂಗಿದ್ದೆ?' ಎಂದು ಪ್ರಶ್ನಿಸಿದ ಕುಪ್ಪಣ್ಣ. ನಸುನಗುತ್ತಾ ತಿಪ್ಪ, 'ಕಾಂಟ್ರಾಕ್ಟರ್‌ಗೆ ಮೊದಲ ದಿನಾನೇ ನನ್ನ ಅವಸ್ಥೆ ಗೊತ್ತಾಯ್ತು. ದುಡ್ಡು ಕೊಟ್ಟು ಊಟಾ ಮಾಡಿ ಬಾ ಎಂದ. ಒಂದು ರೂಮು ಕೊಟ್ಟ. ಅದರಲ್ಲಿ ನಾವು ನಾಲ್ಕು ಜನ ಕೆಲಸಗಾರರಿದ್ದೆವು. ನಾವೇ ಅಡಿಗೆ ಮಾಡ್ಕೊಂಡು ಉಂಡು ಕೆಲಸಕ್ಕೆ ಓಯ್ತಿದ್ದೆವು. ಭಾನುವಾರ ಬಟ್ಟೆ ತೊಳ್ಕೊಳ್ಳೋದು. ಸಾಧ್ಯ ಆದ್ರೆ ಒಂದು ಪಿಚ್ಚರ್ ನೋಡಾದು. ಇಷ್ಟೇ ಆಗಿತ್ತು ಬದುಕು' ಎಂದ. ಮಗ ಕಷ್ಟಪಟ್ಟು ಬದುಕಲು ಕಲಿತಿದ್ದಾನೆ ಎನಿಸಿದಾಗ ಅವನ ಬಗ್ಗೆ ಹೆಮ್ಮೆ ಮೂಡಿತು. ಆದರೂ ಮನಸ್ಸಿನಲ್ಲಿ ಕೊರೆಯುತ್ತಿದ್ದ, 'ಮಗಾ... ಎರಡು ವರ್ಷಗಳಲ್ಲಿ ನಾವ್ಯಾರೂ ಗೆಪ್ತಿಗೆ ಬರಲೇ ಇಲ್ಲವಾ? ಅವ್ವ, ತಂಗೀರನ್ನ ನೋಡಬೇಕು ಅನಿಸಲಿಲ್ವಾ?' ಎಂಬ ಪ್ರಶ್ನೆ ಮೆಲ್ಲಗೆ ಭಾರವಾದ ಸ್ವರದಲ್ಲಿ ಹೊರಗೆ ಬಂತು. ತಿಪ್ಪನ ಧ್ವನಿಯೂ ಆರ್ದ್ರವಾಯಿತು. 'ಮನೆ ಭೋ ಗೆಪ್ತಿಗೆ ಬರತಿತ್ತಪ್ಪ. ಅವ್ವನ್ನ... ತಂಗೀರನ್ನ... ನಿನ್ನ... ಅಜ್ಜಿ–ತಾತನ್ನ ನೆನಿಸ್ಕಂಡು ರಾತ್ರಿ ಅಳ್ತಿದ್ದೆ. ಆರು ತಿಂಗಳಾದ ಮೇಲೆ ಒಮ್ಮೆ ಮನೆಗೆ ಬಂದಿದ್ದೆ. ಎಲ್ಲಾ ಬೆಂಗಳೂರಿಗೆ ಒಂಟೋಗವ್ರೆ ಅಂದ್ರು ಪಕ್ಕದವ್ರು. ಅತ್ಕೊಂಡು ವಾಪಸ್ಸಾದೆ. ಇನ್ನ ಈ ಜೀವನದಲ್ಲಿ ನೀವು ಸಿಗ್ತೀರೋ ಇಲ್ವೊ? ಸಿಕ್ಕರೂ ನನ್ನ ಕ್ಷಮಿಸ್ತೀರೊ ಇಲ್ವೋ ಅಂತ ಅನ್ಕಂತಿದ್ದೆ' ಎಂದು ಮುಖ ತಿರುಗಿಸಿದ. ಕಣ್ಣಾಲಿಗಳಲ್ಲಿ ನೀರಿತ್ತು. ಕುಪ್ಪಣ್ಣನ ಹೃದಯ ದ್ರವಿಸಿ ಹೋಯಿತು.

ಎಷ್ಟು ಒಳ್ಳೆಯ ಹುಡುಗ... ಅಂಬೇಡ್ಕರ್, ಅಬ್ದುಲ್ ಕಲಾಮ್ ಆಗದಿದ್ದರೂ ಪರವಾಗಿಲ್ಲ. ನಮ್ಮ ಮಗನಾಗಿ ಉಳಿದ್ರೆ ಸಾಕು. ಸಾಮಾನ್ಯ ಹುಡುಗನಾದ್ರೂ ಸರಿ... ನಿಯತ್ತಿನಿಂದ ದುಡದ್ರೆ ಸಾಕು. ಅವನನ್ನು ಯಾರಿಗೂ ಹೋಲಿಸುವುದು ಬೇಡ.. ಕೈಗೂಡದ ನಮ್ಮ ಆಸೆಗಳ ಮೂಟೆ ಅವನ ಹೆಗಲ ಮೇಲೆ ಹೊರಿಸುವುದು ಬೇಡ... ಎಂದು ನಿರ್ಧರಿಸಿಕೊಂಡು ನಿರಾಳವಾದ. ಮಗನ ಮುಗ್ಧ ಮನಸ್ಸನ್ನು ಅರಿತುಕೊಳ್ಳದೇ ಹೋದುದಕ್ಕೆ ಪಶ್ಚಾತ್ತಾಪವೆನಿಸಿ ಕಣ್ಣ ಹನಿಗಳನ್ನು ಒರೆಸಿಕೊಂಡ. 'ಸರ್ರರಿ... ನಡಿ ಇನ್ನು ಮನೆಗೆ ಓಗಾನ' ಎಂದು ಎದ್ದು ಅವನ ಹೆಗಲ ಮೇಲೆ ಕೈ ಇಟ್ಟ. ತಿಪ್ಪ ಮೆತ್ತಗೆ 'ಅವ್ವ ಬೈತದೆ...' ಎನ್ನುತ್ತ ಅಪ್ಪನ ಮುಖ ನೋಡಿದ. 'ಬೋದ್ರು ಭೋ ಖುಷಿ ಪಡ್ತದೆ. ನಿನ್ನ ಕಾಣದಲೆ ಎಷ್ಟು ಬಕೆಟ್ ಕಣ್ಣೀರು ಸುರಿಸ್ತೋ... ನಡಿ' ಎಂದ ಕುಪ್ಪಣ್ಣನ ಮೊಗದಲ್ಲಿ ಬೆಳದಿಂಗಳ ಹೂ ನಗೆ. ಅದು ತಿಪ್ಪನ ಮುಖದಲ್ಲೂ ಪ್ರತಿಫಲಿಸಿತು.

ಪ್ರತಿಕ್ರಿಯಿಸಿ: feedback@sudha.co.in